ಶ್ರೀ ಡಿ.ಬಿ. ಚಂದ್ರೇಗೌಡ:-ಬೇರೆ ಬೇರೆ ಭಾಗ ಇದೆ. ಅದು . . . . . .

ಛೇರ್ಮನ್:-ನೋಟೀಸ್ ಕೊಡಿ ಸರ್.

ಶ್ರೀ ಡಿ.ಬಿ.ಚಂದ್ರೇಗೌಡ:- ಇಲ್ಲಿ ಹಿಂದೆ ಚರ್ಚೆ ಆಗಿದೆ, ಉತ್ತರ ಕೊಟ್ಟಿದ್ದಾರೆಂದರೆ ಬೇರೆ ಯಾವುದಾದರೂ ರೂಪದಲ್ಲಿ ಚರ್ಚೆಮಾಡೋಣ ಎನ್ನುವುದಕ್ಕೆ ಸಿದ್ಧವಾಗದೇ ಇದ್ದರೆ, ತಾಂತ್ರಿಕ ಕಾರಣ ಹೇಳಿ, ಹಿಂದೆ ಹೇಳಿದ್ದೇವೆ, ಡಿಮ್ಯಾಂಡ್ ಮೇಲೆ ಚರ್ಚೆಯಾಗಿದೆ, ಉತ್ತರ ಕೊಟ್ಟಿದ್ದೇವೆ ಎಂದರೆ ಇಂತಹ ಒಂದು ರಾಜ್ಯದ ಹಿತದ ವಿಚಾರದಲ್ಲಿ ಕೂಡ ಸರ್ಕಾರ ಇಂತಹ ಮೊಂಡು ನಿಲುವನ್ನು, ಧೈರ್ಯವನ್ನು . . . . . .

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:-ವಿಧಾನ ಸಭೆಯಲ್ಲಿ ಉತ್ತರ ಕೊಡುತ್ತಾರೆಂದು ಹೇಳಿ . . . . . .

ಛೇರ್ಮನ್:- ಮಾನ್ಯ ಮುಖ್ಯಮಂತ್ರಿಗಳು ಅಲ್ಲದೇ ಬೇರೆ ಯಾರೂ ಏನೇ ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಈ ಸಮಯದಲ್ಲಿ ವಿರೋಧಪಕ್ಷದ ನಾಯಕರು ಮತ್ತು ಜನತಾ ದಳದ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:-ಇದುವರೆವಿಗೂ ಬಂದಿರುವ ಸಂಪ್ರದಾಯ ಏನು ? ನಿಲುವಳಿ ಸೂಚನೆಯ ಬಗ್ಗೆ . . . .

ಛೇರ್ಮನ್:-ನಿಲುವಳಿ ಸೂಚನೆಯನ್ನು ಕನ್ವರ್ಟ್ ಮಾಡುವುದಕ್ಕೆ ಬರುವುದಿಲ್ಲ. ನೀವು ಬರೆದು ಕಳುಹಿಸಿ. ಕಾನೂನು ಚೌಕಟ್ಟಿನಲ್ಲಿ ಯಾವ ರೀತಿ ತೆಗೆದುಕೊಂಡು ಏನು ಮಾಡಬೇಕೋ ಅದನ್ನು ಮಾಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಇದರಲ್ಲಿ ಬರುವುದಿಲ್ಲವಾದರೆ ಈಗ ಬೇರೆ ರೂಪದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಛೇರ್ಮನ್:-ನೀವು ಬರೆದು ಕಳುಹಿಸಿ. ಈಗ ಕನ್ವರ್ಟ್ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಛೇರ್ಮನ್:- ನೀವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಏಕೆ ಮಾತನಾಡುತ್ತೀರಿ ಮತ್ತೆ ? ಪ್ರಯೋಜನ ಏನು ? ಏನಾದರೂ ಪ್ರಯೋಜನ ಇದ್ದರೆ ಮಾತನಾಡಿ. ಯಡಿಯೂರಪ್ಪನವರೇ, ನಿಮ್ಮ ಸದಸ್ಯರಿಗೆ ಸ್ವಲ್ಪ ಹೇಳಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:-ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಆಗುವುದಿಲ್ಲ ಎಂದು ಹೇಳಿದಿರಿ. ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಛೇರ್ಮನ್:-ಬರೆದು ಕಳುಹಿಸಿ. I have already given my ruling.

ಶ್ರೀ ಬಿ.ಎಸ್.ಯಡಿಯೂರಪ್ಪ:- 500 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಲೂಟಿಯಾಗುತ್ತಿದೆ. ಶಾಸಕರ ಹೆಸರು ಇದೆ, ಮಂತ್ರಿಗಳ ಹೆಸರೂ ಇದೆ, ಅವರಿಗೆ ಬೇಕಾದವರಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಎಲ್ಲಾ ಚರ್ಚೆಯಾಗುತ್ತಿದೆ. ಸದನ ಸಮಿತಿ ಮಾಡಿದರೆ . . . .

ಛೇರ್ಮನ್:- ಚರ್ಚೆ ಮಾಡಬೇಡಿ ಎಂದು ಎಲ್ಲಾದರೂ ಹೇಳಿದ್ದೇವೆಯೇ ? ಬರೆದು ಕೊಡಿ ಎಂದು ಹೇಳಿದ್ದೇವೆ. ಅವರು ಬರೆದು ಕೊಡಬೇಡಿ ಎಂದು ಹೇಳಿಲ್ಲ. ನೀವು ಬರೆದು ಕೊಡಿ ಕಾನೂನು ಬದ್ಧವಾಗಿದ್ದರೆ, ಅವಕಾಶ ಮಾಡಿಕೊಡೋಣ. ಅವಕಾಶ ಇದ್ದರೆ ಚರ್ಚೆ ಆಗಲಿ. ಏನಿದ್ದರೂ ಬರೆದುಕೊಡಿ. ಅದನ್ನು ಕಾನೂನು ಬದ್ಧವಾಗಿದ್ದರೆ ಮಾಡೋಣ. ಅವಕಾಶ ಇದ್ದರೆ ಆಗಲಿ.